ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE 5/6/20

ವಿಡಿಯೋ ಕಾನ್ಫರೆನ್ಸ್ ಮೂಲಕ ಏಳು ಒಪ್ಪಂದ, ಚೀನಾ ಎದುರಿಸಲು ಕಾರ್ಯತಂತ್ರ | ಮೊದಲನೇ ದ್ವಿಪಕ್ಷೀಯ ಸಭೆ

# ಭಾರತ-ಆಸ್ಟ್ರೇಲಿಯಾ ಮಧ್ಯೆ ಮೊದಲ ಆನ್‌ಲೈನ್ ಶೃಂಗ

**ನವದೆಹಲಿ:** ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ಗುರುವಾರ ಪ್ರಪ್ರಥಮ ಆನ್‌ಲೈನ್ ಶೃಂಗಸಭೆ ನಡೆಸಿ ಏಳು ಮಹತ್ವದ ಒಪ್ಪಂದಕ್ಕೆ ಅನುಮೋದನೆ ನೀಡಿದ್ದಾರೆ. ವಿದೇಶಿ ನಾಯಕರೊಬ್ಬರೊಂದಿಗೆ ಮೋದಿ ದ್ವಿಪಕ್ಷೀಯ ಆನ್‌ಲೈನ್ ಶೃಂಗಸಭೆ ನಡೆಸಿದ್ದು ಇದೇ ಮೊದಲ ಸಲವಾಗಿದೆ. ಉಭಯ ದೇಶಗಳು ಸರಕು ಸಾಗಣೆಗೆ ಮಿಲಿಟರಿ ನೆಲೆಗಳನ್ನು ಬಳಸಿಕೊಳ್ಳುವುದಕ್ಕೆ ಸಂಬಂಧಿಸಿದ ಪ್ರಮುಖ ಒಪ್ಪಂದವೂ ಇದರಲ್ಲಿ ಒಳಗೊಂಡಿದೆ.

**ಚೀನಾ ಹಣಿಯಲು ತಂತ್ರ:** ಉಭಯ ದೇಶಗಳ ರಕ್ಷಣಾ ವಿಚಾರದ ಒಡಂಬಡಿಕೆ ಮಿಲಿಟರಿ ವಿಮಾನಗಳು ಮತ್ತು ನೌಕೆಗಳ ನಿರ್ವಹಣೆಗಾಗಿ ಪರಸ್ಪರರ ಸೇನಾ ನೆಲೆಗಳನ್ನು ಬಳಸಿಕೊಳ್ಳಲು ಅವಕಾಶ ಕಲ್ಪಿಸುತ್ತದೆ. ಇದು ಚೀನಾದ ಮಿಲಿಟರಿ ಮತ್ತು ಆರ್ಥಿಕ ಶಕ್ತಿಯನ್ನು ಸಮರ್ಥವಾಗಿ ಎದುರಿಸುವ ಕಾರ್ಯತಂತ್ರದ ಭಾಗವೆಂದು ಹೇಳಲಾಗಿದೆ. ಅಮೆರಿಕದೊಂದಿಗೆ ಕೂಡ ಭಾರತ ಇದೇ ರೀತಿಯ ಒಪ್ಪಂದ ಮಾಡಿಕೊಂಡಿದೆ. ಆಸ್ಟ್ರೇಲಿಯಾದ ರಫ್ತಿನಲ್ಲಿ ಚೀನಾ ಅತಿ ದೊಡ್ಡ ಗ್ರಾಹಕ ರಾಷ್ಟ್ರ. ಆದರೂ ಇತ್ತೀಚಿನ ದಿನಗಳಲ್ಲಿ ಉಭಯ ದೇಶಗಳ ನಡುವೆ ವಾಣಿಜ್ಯ ಬಿಕ್ಕಟ್ಟು ಉಂಟಾಗಿದೆ. ಅಲ್ಲದೆ ಮಾರಕ ಕರೊನಾ ವೈರಸ್ ಹರಡುವಿಕೆ ವಿಚಾರದಲ್ಲಿ ಚೀನಾದ ವಿರುದ್ಧ ಜಾಗತಿಕ ಅಭಿಪ್ರಾಯ ರೂಪಿಸಲು ಆಸ್ಟ್ರೇಲಿಯಾ ಪ್ರಯತ್ನಿಸುತ್ತಿದೆ.



ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆದ ಈ ಶೃಂಗವು ಭಾರತ- ಆಸ್ಟ್ರೇಲಿಯಾ ಮೈತ್ರಿಯಲ್ಲಿ, ವ್ಯವಹಾರ ನಡೆಸುವ ಒಂದು ವಿನೂತನ ಮಾದರಿಯಾಗಿದೆ

| ನರೇಂದ್ರ ಮೋದಿ ಪ್ರಧಾನಿ

## ಸಮೋಸಾ-ಕಿಚಡಿ ರಾಜತಾಂತ್ರಿಕತೆ!

ಭಾರತ-ಆಸ್ಟ್ರೇಲಿಯಾ ಪ್ರಧಾನಿಗಳ ಆನ್‌ಲೈನ್ ಶೃಂಗಸಭೆ 'ಸಮೋಸಾ-ಕಿಚಡಿ' ರಾಜತಾಂತ್ರಿಕತೆಯೊಂದಿಗೆ ಮುಕ್ತಾಯಗೊಂಡಿತು. ಮುಂದಿನ ಮುಖತಃ ಭೇಟಿಯ ಒಳಗಾಗಿ ಗುಜರಾತಿ ಕಿಚಡಿ ಮಾಡಲು ಕಲಿಯುವುದಾಗಿ ಮಾರಿಸನ್ ಹೇಳಿದರು. 'ಭಾರತದ ಸಮೋಸಾಕ್ಕಾಗಿ ಧನ್ಯವಾದಗಳು. ವಾರಾಂತ್ಯದಲ್ಲಿ ಸಮೋಸಾ ಸವಿದು ಸಂಭ್ರಮಿಸುತ್ತೇವೆ' ಎಂದು ಸಮೋಸಾ ಮಾಡುವುದನ್ನು ಕಲಿತಿರುವ ಬಗ್ಗೆ ಮಾರಿಸನ್ ತಿಳಿಸಿದರು. ಮೋದಿಯವರ ಪ್ರಖ್ಯಾತ ಅಪ್ಪುಗೆಯಿಂದ ವಂಚಿತನಾಗಿರುವುದಾಗಿಯೂ ಮಾರಿಸನ್ ಹೇಳಿದ್ದಾರೆ. ಮಾರಿಸನ್ ಟ್ವೀಟ್‌ಗೆ ಪ್ರತಿಕ್ರಿಯಿಸಿದ ಮೋದಿ, ನಿಮ್ಮ ಸಮೋಸಾ ಭಾರತದಲ್ಲಿ ಚರ್ಚೆಗೆ ಗ್ರಾಸವಾಗಿದೆ ಎಂದಿದ್ದಾರೆ.

## ವಹಿವಾಟು

- 2018-19ರಲ್ಲಿ ಭಾರತ-ಆಸ್ಟ್ರೇಲಿಯಾ ನಡುವಿನ ವಾಣಿಜ್ಯ ವಹಿವಾಟು ಸುಮಾರು 21 ಬಿಲಿಯನ್ ಡಾಲರ್ (ಅಂದಾಜು ₹ 1.58 ಲಕ್ಷ ಕೋಟಿ)
- ಭಾರತದಲ್ಲಿ ಆಸ್ಟ್ರೇಲಿಯಾದ ಒಟ್ಟು ಹೂಡಿಕೆ 10.74 ಬಿಲಿಯನ್ ಡಾಲರ್ (₹ 81 ಸಾವಿರ ಕೋಟಿ).
- ಆಸ್ಟ್ರೇಲಿಯಾದಲ್ಲಿ ಭಾರತದ ಹೂಡಿಕೆ 10.45 ಬಿಲಿಯನ್ ಡಾಲರ್ (₹ 78,889 ಕೋಟಿ)
- ಆಸ್ಟ್ರೇಲಿಯಾದ ಸೂಪರ್ ಪೆನ್ಶನ್ ಫಂಡ್, ಭಾರತದ ರಾಷ್ಟ್ರೀಯ ಹೂಡಿಕೆ ಮತ್ತು ಮೂಲಸೌಕರ್ಯ ನಿಧಿಯಲ್ಲಿ ಒಂದು ಬಿಲಿಯನ್ ಡಾಲರ್ ಹೂಡಿದೆ.

## ಮೋದಿ ಪ್ರತಿಪಾದನೆ

ಜಗತ್ತಿನೆಲ್ಲೆಡೆ 65 ಲಕ್ಷಕ್ಕೂ ಹೆಚ್ಚು ಜನರನ್ನು ಬಾಧಿಸಿ 3.88 ಲಕ್ಷ ಜನರ ಸಾವಿಗೆ ಕಾರಣವಾದ ಮಹಾಮಾರಿ ಕೋವಿಡ್-19ನಿಂದ ಉದ್ಭವಿಸಿದ ಆರ್ಥಿಕ ಮತ್ತು ಸಾಮಾಜಿಕ ಬಿಕ್ಕಟ್ಟಿನ ದುಷ್ಪರಿಣಾಮ ಎದುರಿಸಲು ಸಮಗ್ರ ಹಾಗೂ ಸಮನ್ವಯದ ಪ್ರಯತ್ನ ಅಗತ್ಯ ಎಂದು ಉಭಯ ದೇಶಗಳ 3ನೇ ಶೃಂಗದ ಉದ್ಘಾಟನಾ ಭಾಷಣದಲ್ಲಿ ಮೋದಿ ಪ್ರತಿಪಾದಿಸಿದರು. ಬಿಕ್ಕಟ್ಟನ್ನು ಒಂದು ಅವಕಾಶವಾಗಿ ಕಾಣಲು ನಮ್ಮ ಸರ್ಕಾರ ನಿರ್ಧರಿಸಿದೆ. ಬಹುತೇಕ ಎಲ್ಲ ಕ್ಷೇತ್ರಗಳಲ್ಲಿ ಸಮಗ್ರ ಸುಧಾರಣೆ ಪ್ರಕ್ರಿಯೆ ಆರಂಭಿಸಲಾಗಿದೆ. ಶೀಘ್ರವೇ ಅದರ ಫಲಿತಾಂಶವನ್ನು ನಾವು ಕಾಣಬಹುದಾಗಿದೆ ಎಂದು ಮೋದಿ ಹೇಳಿದರು. ಕಷ್ಟ ಕಾಲದಲ್ಲಿ ಆಸ್ಟ್ರೇಲಿಯಾದಲ್ಲಿರುವ ಭಾರತೀಯರು, ವಿಶೇಷವಾಗಿ ವಿದ್ಯಾರ್ಥಿಗಳ ಯೋಗಕ್ಷೇಮ ನೋಡಿಕೊಂಡಿದ್ದಕ್ಕಾಗಿ ಮಾರಿಸನ್‌ಗೆ ಮೋದಿ ಕೃತಜ್ಞತೆ ಸಲ್ಲಿಸಿದರು. ಇಡೀ ಭಾರತ-ಪೆಸಿಫಿಕ್ ವಲಯ ಹಾಗೂ ಜಗತ್ತಿನ ಹಿತದೃಷ್ಟಿಯಿಂದ ಅದು ಅಗತ್ಯ ಎಂದು ಮೋದಿ ಪ್ರತಿಪಾದಿಸಿದರು.